ರಿಜಿಸ್ಟೇಷನ್ ಮಾಡಿಸದಿದ್ದರೂ ಅವರಿಗೆ ನಾವು ಸವಲತ್ತು ಕೊಡುತ್ತೇವೆ ಎಂದು ಸಚಿವರು ಹಾಗು ನಾನೂ ಹೇಳುತ್ತಿದ್ದೇನಲ್ಲಾ.

8. ವಿತ್ತೀಯ ಕಾರ್ಯಕಲಾಪ

ಉಪಾಧ್ಯಕ್ಷರು : ಈಗ 2006–07ನೇ ಸಾಲಿನ ಕೆಳಕಂಡ ಅನುದಾನ ಬೇಡಿಕೆಗಳ ಮಂಡನೆ.

ಅಭಿಯಾಚನೆ ಕ್ರಮಾಂಕ :1 – – ಕೃಷಿ ಮತ್ತು ತೋಟಾಗಾರಿಕೆ ಇಲಾಖೆ

ಶ್ರೀ ಬಂಡೆಪ್ಪ ಕಾಶೆಂಪುರ್ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2007 ರಮದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **ಕೃಷಿ ಮತ್ತು ತೋಟಗಾರಿಕೆಗೆ** ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 110747.44 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ 8895.05 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ :2–– ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ಶ್ರೀ ಬಿ. ನಾಗರಾಜಶೆಟ್ಟಿ (ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "ರಾಜ್ಯಪಾಲರ ಶೀಫಾರಸ್ಸಿನ ಮೇರೆಗೆ 31.3.2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **ಪಶುಸಂಗೋಪನೆ ಮತ್ತು ಮೀನುಗಾರಿಕೆಗೆ** ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 33171.65 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವು ಹಾಗೂ ಬಂಡವಾಳ ಖಾತೆಯಲ್ಲಿ 1140.00 ಲಕ್ಷ ರೂ.ಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ : 7 – – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಶ್ರೀ ಎಂ.ಪಿ. ಪ್ರಕಾಶ್(ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶೀಫಾರಸ್ಸಿನ ಮೇರೆಗೆ 31.3.2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಗೆ** ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 128396.77 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಹಾಗೂ ಬಂಡವಾಳ ಖಾತೆಯಲ್ಲಿ

73093.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ :13 – – ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಆಹಾರ ಮತ್ತು ನಾಗರೀಕ ಸರಬರಾಜಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 75185.37 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಹಾಗೂ ಬಂಡವಾಳ ಖಾತೆಯಲ್ಲಿ 810.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸುತ್ತೇನೆ."

6.00 ಪಿ.ಎಂ.

ಬೇಡಿಕೆ ಸಂಖ್ಯೆ :17

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ.....

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಇಲಾಖಾ ಬೇಡಿಕೆಗಳನ್ನು ಮಂಡಿಸುವುದಕ್ಕೂ ಸದನಕ್ಕೆ ಬರುವುದು ಬೇಡವೇ? ಕನಿಷ್ಟ ಸೌಜನ್ಯಕ್ಕಾದರೂ ಡಿಮ್ಯಾಂಡ್ ಫ್ಲೇಸ್ ಮಾಡುವುದಕ್ಕೂ ಸಂಬಂಧಪಟ್ಟ ಮಂತ್ರಿಗಳು ಬರುವುದು ಬೇಡವೇ ಅಂತ ಎಲ್ಲದ್ದಕ್ಕೂ ಸಹ ಒಂದು ಮಿತಿ ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನನ್ನ ಮುಂದೆ ಇರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ ಅಂದರೆ ಒಂದು ರೀತಿ, ಬೇಡಿಕೆಗಳನ್ನೂ ಸಹ ನೀವೇ ಮಂಡಿಸುತ್ತೇವೆಂದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಕೌನ್ಸಿಲ್‌ನಲ್ಲಿ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಕರೆಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹೀಗಾದರೆ ಹೇಗೆ? ಅವರ ಇಲಾಖೆ ಬೇಡಿಕೆ. ಅವರಿಗೇನು ದುಡ್ಡು ಬೇಡವೇ?

ಶ್ರೀ ವಾಟಾಳ್ ನಾಗರಾಜ್ : ಆ ಇಲಾಖಾ ಮಂತ್ರಿಗಳಿಗೆ ತಮ್ಮ ಬೇಡಿಕೆಗಳ ಬಗ್ಗೆ ಕಾಳಜಿ ಬೇಡವೇ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಬೇಡಿಕೆಗಳ ಮೇಲೆ ಚರ್ಚೆಯಾಗತಕ್ಕಂಥ ಕಾಲದಲ್ಲಿ ಮಂತ್ರಿಗಳು ಇರಬೇಕು ಎನ್ನುವುದನ್ನು ಕೇಳುತ್ತೇವೆ. ಇಲ್ಲಿ ಸಹಜವಾಗಿ ಇರತಕ್ಕಂಥಾದ್ದು ಕೆಲವು ಮಂತ್ರಿಗಳು ಕೌನ್ಸಿಲ್‌ನಲ್ಲಿ ಇರಬೇಕು ಎನ್ನುವಂತಹ ರೀತಿಯಲ್ಲಿ ನಮ್ಮ ನಮ್ಮಲ್ಲಿಯೇ

ಅಧಿಕಾರವನ್ನು ಹಂಚಿಕೊಂಡಿದ್ದೇವೆ. ಆ ಕಾರಣಕ್ಕಾಗಿ ಅವರು ಅಲ್ಲಿದ್ದಾರೆ. ಚರ್ಚೆಯಾಗುವಂತಹ ಸಮಯದಲ್ಲಿ ಸಚಿವರುಗಳು ಇರಬೇಕೆಂದು ತಾವೇನು ಅಪೇಕ್ಷೆ ಪಡುತ್ತೀರಿ ಅದು ಸಹಜ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬೇಡಿಕೆ ಮಂಡಿಸುವುದರಿಂದ ಹಿಡಿದು ಉತ್ತರ ಕೊಡುವವರೆಗೂ ಅವರು ಇರಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಕೌನ್ಸಿಲ್ ಇದೆಯಲ್ಲಾ. ಅಲ್ಲಿ ಮಂತ್ರಿಗಳು ಇರಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಇಲಾಖಾ ಬೇಡಿಕೆಗೆ ಹಣಕೇಳಬೇಕಾದರೆ ಯಾರದೋ ಮುಖಾಂತರ ನೀವು ಕೇಳಿಬಿಡಿ, ನಾನು ಅಲ್ಲಿ ಇರುತ್ತೇನೆ ಎನ್ನುವುದು ಸರಿಯೇ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ತಾವು ಹಿರಿಯ ಸದಸ್ಯರು ಬಹಳ ವರ್ಷಗಳಿಂದ ಇಲ್ಲಿ ಇದ್ದೀರಿ. ಪರಿಷತ್‌ನಲ್ಲೂ ಕೆಲವರು ಕೆಲಸ ಮಾಡುತ್ತಿರುತ್ತಾರೆ. ಉದ್ದೇಶಪೂರ್ವಕವಾಗಿ ಅವರು ಶಾಸನಸಭೆ ನಡೆಯತಕ್ಕಂಥ ಸಮಯದಲ್ಲಿ ಹೊರಗಡೆ ಹೋಗಿದ್ದಾರೆಂದರೆ ತಾವು ಆಕ್ಷೇಪ ಮಾಡಿ ಆದರೆ ಇಲ್ಲಿ ಯಾರಾದರೂ ಕೂಡ ಮಂತ್ರಿಗಳು ಮಂಡಿಸಬಹುದು, ಅನೇಕ ಬಾರಿ ಇದಕ್ಕಾಗಿ ಉತ್ತರ ಕೊಟ್ಟಿರತಕ್ಕಂಥಾದ್ದು ಇದೆ. ತಾವೂ ಕೂಡ ನೋಡಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಎಲ್ಲರಿಗೂ ರೆಸ್ಟ್ ಕೊಟ್ಟು ಕಳುಹಿಸಿಬಿಡಿ. ಎಲ್ಲವನ್ನು ನೀವೇ ಮಂಡಿಸಿ. ಅಫಿಷಿಯಲ್ ಆಗಿ ಬೇಡಿಕೆ ಮಂಡಿಸಲು ಒಬ್ಬರು ಉತ್ತರ ಕೊಡಲು ಒಬ್ಬರು ಅಂತ ಡೆಸಿಗ್ನೇಟ್ ಮಾಡಿಬಿಡಿ.

ಶ್ರೀ ಎಂ.ಪಿ. ಪ್ರಕಾಶ್ : ಕೌನ್ಸಿಲ್ ಆಫ್ ಮಿನಿಸ್ಟರ್ಸ್ ಎನ್ನುವುದು ಅದೇ ಕಾರಣಕ್ಕಾಗಿ

ಉಪಾಧ್ಯಕ್ಷರು : ಆಯಿತು ನೀವು ಮಂಡಿಸಿ.

ಅಭಿಯಾಚನೆ ಕ್ರಮಾಂಕ : 17 – – ಉನ್ನತ ಶಿಕ್ಷಣ

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಡಿ.ಹೆಚ್. ಶಂಕರಮೂರ್ತಿಯವರ (ಉನ್ನತ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **ಉನ್ನತ ಶಿಕ್ಷಣಕ್ಕೆ** ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 539492.72 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಹಾಗೂ ಬಂಡವಾಳ ಖಾತೆಯಲ್ಲಿ 5592.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ :27 – –ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ)

: ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಮುದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 17316.08 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ :28-- ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.207 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5366.63 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ : 23 -- ಕಾರ್ಮಿಕ

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಸಚಿವರು) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2007 ರಮದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಕಾರ್ಮಿಕ"** ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14409.93 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಹಾಗೂ ಬಂಡವಾಳ ಖಾತೆಯಲ್ಲಿ 600.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸುತ್ತೇನೆ."

ಅಭಿಮಾಚನೆ ಕ್ರಮಾಂಕ : 10 -- ಸಮಾಜ ಕಲ್ಯಾಣ

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಬಾಲಚಂದ್ರ ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಸಮಾಜ ಕಲ್ಯಾಣಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 92400.87 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಹಾಗೂ ಬಂಡವಾಳ ಖಾತೆಯಲ್ಲಿ 17755.95 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸುತ್ತೇನೆ."

ಉಪಾಧ್ಯಕ್ಷರು : ಎಲ್ಲಾ ಬೇಡಿಕೆಗಳನ್ನು ಮಂಡಿಸಲಾಗಿದೆ.

ಉಪಾಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡಲಾಗಿದೆ.